## ದಿನಾಂಕ: 06/01/2022 ರ ನೋಡಲ್ ಅಧಿಕಾರಿ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಂಖ್ಯೆ-140 ಚಾಮರಾಜಪೇಟೆ ವಾರ್ಡಿನ ವಾರ್ಡ್ ಸಮಿತಿ ಸಭೆಯ ನಡವಳಿಗಳು

| ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳ ಮತ್ತು ಸದಸ್ಯರುಗಳ ವಿವರಗಳು: | | | ಗೈರು ಹಾಜರಿದ್ದ ಇಲಾಖೆ ಸಿಬ್ಬಂಧಿಗಳು |
|---|---|---|---|
| ಕ್ರ.ಸಂ. | ಅಧಿಕಾರಿ/ ನೌಕರರ ಹೆಸರು | ಪದನಾಮ | |
| 1 | ಶ್ರೀಮತಿ. ಶಶಿಕಲಾ. ಎನ್ | ಉಪಾಯುಕ್ತರು (ಬೊಮ್ಮನಹಳ್ಳಿ) ಮತ್ತು ನೋಡಲ್ ಅಧಿಕಾರಿ | BWSSB |
| 2 | ಶ್ರೀ. ಎಂ.ಎಸ್. ಉಮೇಶ್ | ಸಂಚಾಲಕರು ಮತ್ತು ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ-140 | BESCOM |
| 3 | ಶ್ರೀಮತಿ. ಗಂಗಮ್ಮ. ಎನ್ | Link Worker , SWM | SWD |
| 4 | ಶ್ರೀಮತಿ. ಪಾರ್ವತಿ. ಜೆ | Link Worker, SWM | ಪೋಲೀಸ್ ಇಲಾಖೆ, ಸಂಚಾರಿ ಮತ್ತು ಕಾನೂನು ಸುವ್ಯವಸ್ಥೆ |
| 5 | ಶ್ರೀ. ನರಸಿಂಹ ಮೂರ್ತಿ | ಸ್ಥಳೀಯ ನಾಗರೀಕರು | ಆರೋಗ್ಯ ವೈದ್ಯಾಧಿಕಾರಿಗಳು |
| 6 | ಶ್ರೀ. ನಟರಾಜು | ಸ್ಥಳೀಯ ನಾಗರೀಕರು | ಕಂದಾಯ ಅಧಿಕಾರಿಗಳು |

ವಾರ್ಡ್ ಸಮಿತಿಯ ಉದ್ದೇಶ ಮತ್ತು ಸಭೆಯ ಮಹತ್ವವನ್ನು ತಿಳಿಸಿ ಸಭೆಯಲ್ಲಿ ಉಪಸ್ಥಿತರಿದ್ದ ಅಧ್ಯಕ್ಷರು, ಸದಸ್ಯರು ಹಾಗೂ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಲಾಯಿತು.

1. ಹಿಂದಿನ ಸಭೆಯ ನಡವಳಿಗಳಲ್ಲಿದ್ದ ವಿಷಯಕ್ಕೆ ತೆಗೆದುಕೊಂಡ ಕ್ರಮದ ಬಗ್ಗೆ ಓದಿ ರೆಕಾರ್ಡ್ ಮಾಡಲಾಯಿತು. ದಾಖಲಿಸಲಾದ ವಿಷಯಗಳಲ್ಲಿ ಬಾಕಿ ಉಳಿದಿರುವ ಕೆಲಸ ಕಾರ್ಯಗಳನ್ನು ಜರೂರಾಗಿ ಕ್ರಮವಹಿಸುವಂತೆ ಸಂಬಂಧಿಸಿದವರಿಗೆ ಸೂಚಿಸಲಾಯಿತು.

2. <u>ಇಂದಿನ ಸಭೆಯಲ್ಲಿ ಮಾನ್ಯ ಅಧ್ಯಕ್ಷರು ಚರ್ಚಿಸಿದ ವಿಷಯಗಳು:</u>

| ಕ್ರಸಂ | ವಿಷಯಗಳು | ನಿರ್ಣಯ | ಕ್ರಮ ತೆಗೆದುಕೊಳ್ಳಬೇಕಾದ ಅಧಿಕಾರಿ |
|---|---|---|---|
| 1 | ವಾರ್ಡ್ ವ್ಯಾಪ್ತಿಯಲ್ಲಿ ಅನಧೀಕೃತವಾಗಿ ವಾಣಿಜ್ಯ ಚಟುವಟಿಕೆಗಳನ್ನು ತಡೆಗಟ್ಟುವ ಬಗ್ಗೆ | ಈ ಬಗ್ಗೆ ಸಭೆಯಲ್ಲಿ ಅನಧೀಕೃತವಾಗಿ ವಾಣಿಜ್ಯ ಚಟುವಟಿಕೆಗಳು ಹೆಚ್ಚಾಗುತ್ತಿರುವುದರಿಂದ ವಾರ್ಡ್ ವ್ಯಾಪ್ತಿಯಲ್ಲಿ ವಾಣಿಜ್ಯ ಚಟುವಟಿಕೆಗಳಿಂದ ಉತ್ಪತ್ತಿಯಾಗುತ್ತಿರುವ ತ್ಯಾಜ್ಯ ಹೆಚ್ಚಾಗುತ್ತಿದ್ದು ಹಾಗೂ ವಾರ್ಡ್ ವ್ಯಾಪ್ತಿಯಲ್ಲಿ ಸಂಚಾರ ದಟ್ಟಣೆ ಉಂಟಾಗುತ್ತಿರುವುದರಿಂದ ವಾಣಿಜ್ಯ ಚಟುವಟಿಕೆಗಳಿಗೆ ಸಂಬಂಧಪಟ್ಟಂತೆ ಟ್ರೇಡರ್ಸ್ ಅಸೋಸಿಯೇಷನ್ ರವರೊಂದಿಗೆ ಸಭೆಯನ್ನು ನಿಗಧಿಪಡಿಸುವಂತೆ ಸೂಚಿಸಲಾಯಿತು. | ಆರೋಗ್ಯ ವೈದ್ಯಾಧಿಕಾರಿ (ಚಾಮರಾಜಪೇಟೆ ವಿಭಾಗ) |
| 2 | ನೀರಿನ ಸಮಸ್ಯೆ ಉಂಟಾಗುತ್ತಿರುವ ಬಗ್ಗೆ | BWSSB ಅಧಿಕಾರಿಗಳು ತಪಾಸಣೆ ಕೈಗೊಂಡು ನೀರಿನ ಸಮಸ್ಯೆ ಪರಿಹರಿಸಲು ಕ್ರಮವಹಿಸುವಂತೆ ಸೂಚಿಸಲಾಯಿತು. | ಸಹಾಯಕ ಕಾರ್ಯಪಾಲಕ ಅಭಿಯಂತರರು, BWSSB |

ಪ್ರ.ತಿ.ನೋ

| | | | |
|---|---|---|---|
| 3 | ವಾರ್ಡ್ ವ್ಯಾಪ್ತಿಯಲ್ಲಿ 18 ವರ್ಷ ಮೇಲ್ಪಟ್ಟ ಸಾರ್ವಜನಿಕರಿಗೆ ಕೋವಿಡ್ ಲಸಿಕೆ ನೀಡುವ ಬಗ್ಗೆ | ಸಭೆಯಲ್ಲಿ ಹಾಜರಿದ್ದ ವೈದ್ಯರು ಹೊಸದಾಗಿ ವೈದ್ಯರ ತಂಡ ಮನೆಗಳ ಕಡೆ ಎಂಬ ಕಾರ್ಯವನ್ನು ವಾರ್ಡ್ ವ್ಯಾಪ್ತಿಯಲ್ಲಿ ಪ್ರಾರಂಭಿಸಿದ್ದು, ಇದರಿಂದ ಮನೆಗಳಲ್ಲಿ ಉತ್ಪತ್ತಿಯಾಗುವ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲು ಕಾರ್ಯಾಚರಣೆ, ಕೋವಿಡ್ ಲಸಿಕೆಯನ್ನು ಪಡೆಯದೆ ಇರುವವರನ್ನು ಗುರುತಿಸುವ ಸಲುವಾಗಿ ಈ ಕಾರ್ಯವನ್ನು ಹೊಸದಾಗಿ ಪ್ರಾರಂಭಿಸಲಾಗಿದೆ ಎಂದು ಸಭೆಯಲ್ಲಿ ಹಾಜರಿದ್ದ ವೈದ್ಯರು ತಿಳಿಸಿದರು. | ಆರೋಗ್ಯ ವೈದ್ಯಾಧಿಕಾರಿ, ಚಾಮರಾಜಪೇಟೆ |
| 4 | ವಾರ್ಡಿನ ಮುಖ್ಯ ರಸ್ತೆಯಲ್ಲಿರುವ ರಸ್ತೆ ಗುಂಡಿಗಳನ್ನು ಮುಚ್ಚಲು ಬಗ್ಗೆ | ವಾರ್ಡಿನ ಮುಖ್ಯರಸ್ತೆಯಲ್ಲಿ ಮಳೆಗಾಲದಿಂದ ಹೊಸದಾಗಿ ಗುರುತಿಸಿರುವ ರಸ್ತೆ ಗುಂಡಿಗಳನ್ನು ಜಲಮಂಡಳಿ ಅಗೆತಗಳು ಹಾಗೂ ಇನ್ನಿತರ ಅಗೆತಗಳಿಗೆ ಸಂಬಂಧಪಟ್ಟಿರುವುದರಿಂದ ರಸ್ತೆ ಗುಂಡಿಗಳನ್ನು ಮುಚ್ಚಲು ಅಗತ್ಯ ಕ್ರಮಕೈಗೊಳ್ಳುವ ಬಗ್ಗೆ ಅಧ್ಯಕ್ಷರು ರವರು ತುರ್ತಾಗಿ ಕ್ರಮವಹಿಸಲು ಅಧಿಕಾರಿಗಳಿಗೆ ಸೂಚಿಸಲಾಯಿತು. | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಚಾಮರಾಜಪೇಟೆ ಉಪವಿಭಾಗ, ಸಹಾಯಕ ಅಭಿಯಂತರರು ವಾರ್ಡ್–140 |
| 5 | ಚಾಮರಾಜಪೇಟೆ 8ನೇ ಅಡ್ಡರಸ್ತೆ ಹಾಗೂ 4ನೇ ಅಡ್ಡರಸ್ತೆಯಲ್ಲಿ Road Hump ಗಳಿಗೆ Reflective white Marking ಮಾಡುವ ಬಗ್ಗೆ | ಈ ಬಗ್ಗೆ ಪ್ರಸ್ತಾಪಿತ ಕಾಮಗಾರಿ ಪೂರ್ಣಗೊಂಡಿದ್ದು ವಾರ್ಡ್ ವ್ಯಾಪ್ತಿಯಲ್ಲಿ ಬೇರೆ ಬೇರೆ ಜಾಗಗಳನ್ನು ಗುರ್ತಿಸಿ Reflective white Marking ಮಾಡಲಾಗುವುದು ಎಂದು ಸಭೆಯಲ್ಲಿ ತಿಳಿಸಲಾಯಿತು. | ಸಹಾಯಕ ಕಾರ್ಯಪಾಲಕ ಅಭಿಯಂತರರು, ಸಹಾಯಕ ಅಭಿಯಂತರರು ವಾರ್ಡ್–140 |
| 6 | ಬೀದಿಬದಿ ವ್ಯಾಪಾರಿಗಳಿಂದ ಮುಖ್ಯರಸ್ತೆಯಲ್ಲಿ ವಾಹನ ದಟ್ಟಣೆ ಹಾಗೂ ರಸ್ತೆ ಅಪಘಾತ ಸಂಭವಿಸುತ್ತಿರುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. | ಈ ಬಗ್ಗೆ ಚಾಮರಾಜಪೇಟೆ ಬೀದಿಬದಿ ವ್ಯಾಪಾರಿಗಳನ್ನು ತೆರವುಗೊಳಿಸಲು ಪೋಲಿಸ್ ಇಲಾಖೆಯ ಕಾನೂನು ಮತ್ತು ಸುವ್ಯವಸ್ಥೆ ಹಾಗೂ ಸಂಚಾರಿ ವಿಭಾಗದವರಿಗೆ ಪತ್ರ ಮುಖೇನ ತಿಳಿಸಲು ಸಭೆಯಲ್ಲಿ ನಿರ್ಧರಿಸಲಾಯಿತು. | ಸಹಾಯಕ ಕಾರ್ಯಪಾಲಕ ಅಭಿಯಂತರರು ಸಹಾಯಕ ಅಭಿಯಂತರರು ವಾರ್ಡ್:140 |
| 7 | ವಾರ್ಡ್ ವ್ಯಾಪ್ತಿಯ ಕೆಂಪಾಂಬುದಿ ಕೆರೆಯ ಪಕ್ಕದ ರಸ್ತೆ ಬದಿಯಲ್ಲಿ ಅನಧೀಕೃತವಾಗಿ ತ್ಯಾಜ್ಯವನ್ನು ಹಾಗೂ Debris ನ್ನು ಸುರಿಯುತ್ತಿರುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. | ಈ ವಿಷಯಕ್ಕೆ ಸಂಬಂಧಿಸಿದಂತೆ ಕೆಂಪಾಂಬುದಿ ಕೆರೆಯ ಪಕ್ಕದ ರಸ್ತೆ ಬದಿಯಲ್ಲಿ ಅನಧೀಕೃತವಾಗಿ ತ್ಯಾಜ್ಯವನ್ನು ಹಾಗೂ Debris ನ್ನು ಸುರಿಯುತ್ತಿರುವುದನ್ನಯ ತಡೆಗಟ್ಟಲು ಪೋಲೀಸ್ ಇಲಾಖೆ ವತಿಯಿಂದ ರಾತ್ರಿ ಪಾಳಯದಲ್ಲಿ ಹೆಚ್ಚುವರಿಯಾಗಿ ಈ ಪ್ರದೇಶದಲ್ಲಿ Night Patroling ಮಾಡಲು ಹಾಗೂ ಈಗಾಗಲೇ ಸಂಗ್ರಹಣಗೊಂಡಿರುವ Debris ಮತ್ತು ತ್ಯಾಜ್ಯವನ್ನು ತೆರುವುಗೊಳಿಸಲು ಸಮೂಹಿಕ ಸ್ವಚ್ಛತಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ತಿಳಿಸಲಾಯಿತು. | ಪೋಲೀಸ್ ಇಲಾಖೆ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ಮತ್ತು ಕಾಮಗಾರಿ ವಿಭಾಗ |

ಮೇಲ್ಕಂಡ ಎಲ್ಲಾ ವಿಷಯಗಳೊಂದಿಗೆ ಕಾರ್ಯದರ್ಶಿಗಳು ಸಭೆಯನ್ನು ವಂದನಾರ್ಪಣೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿ ಮತ್ತು
ಸಹಾಯಕ ಅಭಿಯಂತರರು

ಅಧ್ಯಕ್ಷರು &
ನೋಡಲ್ ಅಧಿಕಾರಿ

ಪ್ರತಿಯನ್ನು:–

1. ಮಾನ್ಯ ಆಡಳಿತಾಧಿಕಾರಿ, ಬಿಬಿಎಂಪಿ ರವರ ಅವಗಾಹನೆಗೆ ಸಲ್ಲಿಸಿದೆ.
2. ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಅವಗಾಹನೆಗೆ ಸಲ್ಲಿಸಿದೆ.
3. ಮಾನ್ಯ ಜಂಟಿ ಆಯುಕ್ತರು (ಪಶ್ಚಿಮ) ಬಿಬಿಎಂಪಿ ರವರ ಅವಗಾಹನೆಗೆ ಸಲ್ಲಿಸಿದೆ.
4. ಮಾನ್ಯ ಮುಖ್ಯ ಅಭಿಯಂತರರು (ಪಶ್ಚಿಮ) ಬಿಬಿಎಂಪಿ ರವರ ಅವಗಾಹನೆಗೆ ಸಲ್ಲಿಸಿದೆ.
5. ನೋಡಲ್ ಅಧಿಕಾರಿ, ವಾರ್ಡ್ ಸಂಖ್ಯೆ: 140 ಚಾಮರಾಜಪೇಟೆ ರವರ ಅವಗಾಹನೆಗೆ ಸಲ್ಲಿಸಿದೆ.
6. ಕಾರ್ಯಪಾಲಕ ಅಭಿಯಂತರರು, ಚಾಮರಾಜಪೇಟೆ ವಿಭಾಗ ರವರ ಅವಗಾಹನೆಗೆ ಸಲ್ಲಿಸಿದೆ.
7. ಕಾರ್ಯಪಾಲಕ ಅಭಿಯಂತರರು (ವಿದ್ಯುತ್) ಪಶ್ಚಿಮ ವಿಭಾಗ, ಬಿಬಿಎಂಪಿ ರವರ ಅವಗಾಹನೆಗೆ ಮತ್ತು ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
8. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು & ಸಹಾಯಕ ಅಭಿಯಂತರರು (BWSSB) ಚಾಮರಾಜಪೇಟೆ ವಲಯ ರವರ ಅವಗಾಹನೆಗೆ ಮತ್ತು ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
9. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು & ಸಹಾಯಕ ಅಭಿಯಂತರರು (BESCOM) ಚಾಮರಾಜಪೇಟೆ ವಲಯ ರವರ ಅವಗಾಹನೆಗೆ ಮತ್ತು ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿ.
10. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಬೃಹತ್ ರಾಜಕಾಲುವೆ (SWD) ಪಶ್ಚಿಮ ವಲಯ ರವರ ಅವಗಾಹನೆಗೆ ಮತ್ತು ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
11. ಆರೋಗ್ಯ ವೈದ್ಯಾಧಿಕಾರಿ, ಚಾಮರಾಜಪೇಟೆ ವಲಯ ರವರ ಅವಗಾಹನೆಗೆ ಮತ್ತು ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
12. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಘನತ್ಯಾಜ್ಯ ನಿರ್ವಹಣೆ) ಚಾಮರಾಜಪೇಟೆ ವಿಭಾಗ ರವರ ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
13. ಸಹ ಕಂದಾಯ ಅಧಿಕಾರಿ, ಚಾಮರಾಜಪೇಟೆ ಉಪವಿಭಾಗ ರವರ ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
14. ಪೊಲೀಸ್ ಇನ್ಸ್‌ಪೆಕ್ಟರ್, ಕಾನೂನು ಮತ್ತು ಸುವ್ಯವಸ್ಥೆ, ಚಾಮರಾಜಪೇಟೆ/ವಿ.ವಿ.ಪುರಂ/ಸೆಂಟ್ರಲ್ ಪೊಲೀಸ್ ಠಾಣೆ, ಬೆಂಗಳೂರು ರವರ ಮತ್ತು ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
15. ಆರಕ್ಷಕ ನಿರೀಕ್ಷಕರು, ಜೆ.ಜೆ.ಆರ್. ನಗರ/ ಚಾಮರಾಜಪೇಟೆ ಸಂಚಾರಿ ವಿಭಾಗ, ಬೆಂಗಳೂರು ರವರ ಮತ್ತು ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
16. ವಾರ್ಡ್ ಸಂಖ್ಯೆ: 140 ಚಾಮರಾಜಪೇಟೆ ವಾರ್ಡ್ ಕಮಿಟಿ ಸದಸ್ಯರ ಮಾಹಿತಿಗಾಗಿ ಸಲ್ಲಿಸಿದೆ.